ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1272
2	ಸದಸ್ಯರ ಹೆಸರು	:	ಶ್ರೀ ಎಂ.ನಾರಾಯಣ ಸ್ವಾಮಿ
3	ಉತ್ತರಿಸುವ ದಿನಾಂಕ	:	21-12-2018
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನಲ್ಲಿರುವ ಅಧಿಕೃತ ಜಾಹೀರಾತು ಫಲಕಗಳೆಷ್ಟು;	ಪ್ರಸ್ತುತ ಪಾಲಿಕೆಯ 8 ವಲಯಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳ ಪೈಕಿ ದಿನಾಂಕ:13.08.2018 ಮತ್ತು 15.08.2018ರ ಪತ್ರಿಕಾ ಪ್ರಕಟಣೆಯ ಸೂಚನೆಯಂತೆ 1,705 ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಅಧಿಕೃತವಿರುತ್ತವೆ.
ಆ)	ಬೆಂಗಳೂರು ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು 50000ಕ್ಕೂ ಹೆಚ್ಚು ಅನಧಿಕೃತ ಫಲಕಗಳು ರಾರಾಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿದೆಯೇ;	2016-17ನೇ ಸಾಲಿನಲ್ಲಿ ಹೊಸದಾಗಿ ಸಮೀಕ್ಷೆ ನಡೆಸಿ, ದಾಖಲಿಸಿರುವ ಮಾಹಿತಿ ಪ್ರಕಾರ 2,454 ಅಧಿಕೃತ ಜಾಹೀರಾತು ಫಲಕಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುತ್ತವೆ. ಈ ಮಧ್ಯೆ ಆಗಸ್ಟ್-2018ರಲ್ಲಿ ಮತ್ತೊಮ್ಮೆ ಹೋರ್ಡಿಂಗ್ಸ್ ಕ್ಯಾಪ್ಚರ್ ಆ್ಯಪ್ ಮುಖಾಂತರ ಸಮೀಕ್ಷೆ ನಡೆಸಿ, ದಾಖಲಿಸಿರುವ ಮಾಹಿತಿ ಪ್ರಕಾರ ಅಧಿಕೃತ/ಅನಧಿಕೃತ ಒಳಗೊಂಡಂತೆ 3,551 ಜಾಹೀರಾತು ಫಲಕಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುತ್ತವೆ. ಅವುಗಳ ಪೈಕಿ 1846 ಅನಧಿಕೃತ ಫಲಕಗಳೆಂದು ಪರಿಗಣಿಸಲಾಗಿದೆ.
ಇ)	ಇದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಗಿರುವ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ;	ಮಾನ್ಯ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಮೇಲ್ವಿಚಾರಣೆ ನಡೆಸಿ ಪಾಲಿಕೆಗೆ ನಿರ್ದೇಶಿಸಿರುವ ಪ್ರಕಾರ ಕ್ರಮ ಸಂಖ್ಯೆ:3&4ರಲ್ಲಿ ವಿವರಿಸಿರುವಂತೆ ಪರಿಗಣಿಸಿರುವ 1,846 ಅನಧಿಕೃತ ಜಾಹೀರಾತು ಫಲಕಗಳ ಪೈಕಿ 1,342 ಜಾಹೀರಾತು ಫಲಕಗಳನ್ನು ಏಜೆನ್ಸಿದಾರರು/ ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುತ್ತಾರೆ. 290 ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ತೆರವುಗೊಳಿಸಿದ್ದು, ಉಳಿದಂತೆ 214 ಜಾಹೀರಾತು ಫಲಕಗಳಿಗೆ ವಿವಿಧ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಇರುವುದರಿಂದ ಪಾಲಿಕೆಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿರುವುದಿಲ್ಲ.
ಈ)	ಅನಧಿಕೃತ ಜಾಹೀರಾತು ಫಲಕಗಳನ್ನು ಗುರುತಿಸಿ, ಇನ್ನುಳಿದ ಅನಧಿಕೃತ ಜಾಹೀರಾತು ಫಲಕಗಳನ್ನು ಕೂಡಲೇ ತೆರವುಗೊಳಿಸ ಲಾಗುವುದೇ?	ಆಗಸ್ಟ್-2018ರಲ್ಲಿ ಮತ್ತೊಮ್ಮೆ ಹೋರ್ಡಿಂಗ್ಸ್ ಕ್ಯಾಪ್ಚರ್ ಆ್ಯಪ್ ಮುಖಾಂತರ ಸಮೀಕ್ಷೆ ನಡೆಸಿ, ದಾಖಲಿಸಿರುವ ಮಾಹಿತಿ ಪ್ರಕಾರ ಅಧಿಕೃತ/ಅನಧಿಕೃತ ಒಳಗೊಂಡಂತೆ 3,551 ಜಾಹೀರಾತು ಫಲಕಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುತ್ತವೆ. ಅವುಗಳ ಪೈಕಿ 1846 ಅನಧಿಕೃತ ಫಲಕಗಳನ್ನು ಗುರುತಿಸಲಾಗಿರುತ್ತದೆ.

. . . 2 .

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ:13.08.2018 ಮತ್ತು 15.08.2018 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ, ಬೆಂಗಳೂರು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಪಾಲಿಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾದ ಅನುಮತಿ ಪತ್ರ ಮತ್ತು ಇನ್ನಿತರೆ ಅವಶ್ಯ ದಾಖಲೆಗಳನ್ನು ನಿಗದಿತ ದಿನಾಂಕ:20.08.2018 ರೊಳಗಾಗಿ ಪಾಲಿಕೆಯ ಆಯಾ ವಲಯ ಜಂಟಿ ಆಯುಕ್ತರು ರವರ ಇ-ಮೇಲ್ ಐಡಿಗೆ ಅಥವಾ ಆಯಾ ವ್ಯಾಪ್ತಿ ಪ್ರದೇಶದ ಸಹಾಯಕ ಕಂದಾಯ ಅಧಿಕಾರಿರವರ ಕಛೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ದಿನಾಂಕ:30.08.2018ರೊಳಗೆ ಅಥವಾ ಮುಂಚಿತವಾಗಿ ಸದರಿ ಜಾಹೀರಾತು ಫಲಕಗಳನ್ನು ಸ್ವ-ಇಚ್ಛೆಯಿಂದ ತೆಗೆದುಹಾಕಲು ಸಾರ್ವಜನಿಕರಿಗೆ, ಜಾಹೀರಾತು ಸಂಸ್ಥೆ/ಸಂಘ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ.

ಆದರೂ ಸಹ ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸದ ಅನಧಿಕೃತ ಜಾಹೀರಾತು ಫಲಕಗಳನ್ನು ಸಂಪೂರ್ಣವಾಗಿ ತೆರವುಗೊಳಿಸದ ಕಾರಣ ದಿನಾಂಕ:01.09.2018 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಅನಧಿಕೃತ ಜಾಹೀರಾತು ಫಲಕಗಳನ್ನು ದಿನಾಂಕ:06.09.2018 ರೊಳಗಾಗಿ ಸ್ವ-ಇಚ್ಛೆಯಿಂದ ತೆಗೆದುಹಾಕಲು ಕಾಲವಕಾಶ ನೀಡಲಾಗಿದೆ. ತಪ್ಪಿದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾನೂನು ರೀತ್ಯಾ ಕ್ರಮಕೈಗೊಳ್ಳುತ್ತದೆ. ಮತ್ತು ಆಯಾ ವ್ಯಾಪ್ತಿಯ ಪೊಲೀಸರ ನೆರವುಪಡೆದು ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ತೆರವುಗೊಳಿಸಲಾಗುವುದು ಅಲ್ಲದೆ ತಪ್ಪಿತಸ್ಥ ವ್ಯಕ್ತಿಗಳ/ ಏಜೆನ್ಸಿಗಳ/ಸಂಸ್ಥೆಗಳ ವಿರುದ್ಧ ಸೂಕ್ತ ಕಾನೂನಾತ್ಮಕ ಕ್ರಮಕೈಗೊಳ್ಳಲಾಗುತ್ತದೆಂದು ಅಂತಿಮ ಸೂಚನೆ ನೀಡಲಾಗಿರುತ್ತದೆ.

ಸದರಿ ಸೂಚನೆಯಂತೆ ಹೋರ್ಡಿಂಗ್ಸ್ ಕ್ಯಾಪ್ಚರ್ ಆ್ಯಪ್ ಮುಖಾಂತರ ದಾಖಲಿಸಿರುವ 3,551 ಜಾಹೀರಾತು ಫಲಕಗಳ ಪೈಕಿ 1,705 ಜಾಹೀರಾತು ಫಲಕಗಳಿಗೆ ಸಂಬಂಧಿಸಿ ದಾಖಲೆಗಳು ಸಲ್ಲಿಸಿಕೆಯಾಗಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಕಳೆದ 2 ವರ್ಷಗಳಿಂದ ಯಾವುದೇ ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ನವೀಕರಿಸದೇ ಇರುವುದರಿಂದ ಈ ಎಲ್ಲಾ ಜಾಹೀರಾತುಗಳು ಅನಧಿಕೃತವಾಗಿರುತ್ತವೆಂದು ಪಾಲಿಕೆಯ ಜಂಟಿ ಆಯುಕ್ತರುಗಳು ತೀರ್ಮ ನೀಡಿ ಆದೇಶಗಳನ್ನು ಹೊರಡಿಸಿರುತ್ತದೆ.

ಸಂಖ್ಯೆ: ನಅಇ 660 ಎಂಎನ್‌ಯು 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು